ಧೈರ್ಯವಾಗದೆ ಬಾಗಿ ಅವಳ ಪಾದಗಳನ್ನು ಸ್ಪರ್ಶಿಸಿದೆ. ಅವಳ ಬಳಿಯೇ ಕುಳಿತು ಅವಳ ದುಃಖದ ಕತೆಯನ್ನು ಮತ್ತೊಮ್ಮೆ ಪೂರ್ಣವಾಗಿ ಕೇಳಿದೆ. ನನ್ನೊಡನೆ ಅದನ್ನೆಲ್ಲ ಹೇಳುವ ಮೂಲಕ ಅವಳ ಮನಸ್ಸು ಹಗುರವಾಗುವುದಾದರೆ ಆಗಲಿ ಎಂದು. 'ನಾವು ಪಡೆದು ಬಂದದ್ದೇ ಇಷ್ಟು ಭಾರ್ಗು. ಬಹಳ ಕಾಲ ಮಕ್ಕಳೇ ಇಲ್ಲದ ನಮಗೆ ಮಗನಾಗಿ ನೀನು ಬಂದೆ ಅಂತ ಭಾವಿಸಿದ್ದೆವು. ಆದರೆ ನಿನ್ನ ಹೆತ್ತಬ್ಬೆಯೂ ಒಬ್ಬ ತಾಯಿಯೇ ಅಲ್ಲವೇ. ಕಳೆದ ಮಗ ಮತ್ತೆ ಸಿಕ್ಕಿದಾಗ ಅವಳಿಗೆಷ್ಟು ಸಂತೋಷವಾಗಿರಬಹುದು ಎಂದು ಆ ಕ್ಷಣದಲ್ಲಿ ಅನ್ನಿಸಿದ್ದೆ ನಿನ್ನನ್ನು ಸಂತೋಷದಿಂದಲೇ ಕಳಿಸಿ ಕೊಟ್ಟಿದ್ದೆವು. ನಿನ್ನ ಕಳಿಸಿದ ನಮ್ಮ ನೋವು ಏನೂ ಅಲ್ಲ ಅನ್ನಿಸಿತ್ತು. ಜೊತೆಗೆ ನಮಗೂ ನೀನಿರುವಾಗಲೇ ಪುಟ್ಟ ಕಂದಮ್ಮ ಬಂದಿದ್ದ—ನಿನ್ನ ಕಾಲ್ಗುಣದಿಂದ ಎಂದೇ ಅಂದುಕೊಳ್ಳುವಂತೆ ಅಲ್ಲವೇ? ಆದರೆ ದೇವರಿಗೆ ಆ ನಮ್ಮ ಸಂತೋಷ ಸಹ್ಯವಾಗಲಿಲ್ಲ ನೋಡು. ಕೊಟ್ಟವನೇ ಕೊಂಡೊಯ್ದ. ಕಡೆಗೆ ಎಸ್ಸೆಸ್ಸೆಲ್ಸಿ ಮುಗಿಸಿ ನೌಕರಿಯೂ ಸಿಗದೆ ಹೊಲದಲ್ಲಿಯು ದುಡಿಯಲಾರದೆ ಉಳಿದ ನಮ್ಮ ತಂಗಿಯ ಮಗನೊಬ್ಬನಿದ್ದ. ನನ್ನ ತಂಗಿಯ ನಾಲ್ಕು ಮಂದಿ ಮಕ್ಕಳಲ್ಲಿ ಮೂರನೆಯವನು; ನಿನಗೆ ಆಕ್ಸಿಡೆಂಟಾದ ಬಸ್ಸಿನಲ್ಲಿಯೇ ಪ್ರಾಣ ಕಳೆದುಕೊಂಡವನ ಮಗ. ಅವನಿಗೆ ನನ್ನನ್ನು ಕಂಡರೆ ತುಂಬಾ ಪ್ರೀತಿಯಿತ್ತು. ನಮ್ಮ ಬಳಿಯೇ ಇದ್ದುಬಿಡಪ್ಪ ಎಂದೆ. ಹುಂ ಎಂದ. ತಂಗಿಯೂ ಒಪ್ಪಿದಳು. ಅವರೂ ಕಡು ಬಡತನದಲ್ಲಿಯೇ ಇದ್ದವರು. ಈಗ ಅವನೇ ನಮ್ಮ ಮಗ, ಗೋಪಾಲ, ನಮ್ಮ ಸರ್ವಸ್ವ. ನಿನ್ನ ಹಾಗೆ ಒಳ್ಳೆಯವನೇ. ಏನು ಮಾಡೋಣ ಹೇಳು ಬ್ಯಾಂಕಿನ ಸಾಲಕ್ಕೆ ಇರುವ ಈ ಮನೆಯೂ ಹೋಗುತ್ತೆ ಎಂದು ಇವರನ್ನುತ್ತಿದ್ದಾರೆ. ಹೋದರೆ ಹೋಯಿತು. ತಗೊಂಡಿದ್ದೇನು ಸುಳ್ಳಲ್ಲವಲ್ಲ? ಯಾವತ್ತೂ ಯಾರಿಂದಲೂ ಛೀ, ಥೂ ಅನ್ನಿಸಿ ಕೊಂಡವರು ನಾವಲ್ಲ. ಹೆದರುವುದು ಬೇಡ ಎನ್ನುತ್ತಿದ್ದಾನೆ ಗೋಪಾಲ. ಈಗ ಗ್ಯಾರೇಜಿನಲ್ಲಿ ಅಷ್ಟೋ ಇಷ್ಟೋ ಸಂಬಳ ಕೊಡುತ್ತಿದ್ದಾರೆ. ಅದೇತಕ್ಕೆ ಸಾಲುತ್ತೆ ಹೇಳು. ಅವನಿಗೆ ಒಂದು ಸ್ವಂತ ಉದ್ಯೋಗ ಕೊಡಿಸಿ ಒಂದು ಮದುವೆ ಮಾಡಿ ಹರಹರ ಅಂದುಬಿಡುವ ಅಂತ ನನ್ನ ಆಸೆ... ಈ ಮಗ ಮುಪ್ಪಿನ ಕಾಲದಲ್ಲಿ ನಮ್ಮನ್ನು ನೋಡಿಕೊಂಡಾನೆಂಬ ವಿಶ್ವಾಸವೂ ಇದೆ. ಹುಂ ಹೋಗಲಿ ಬಿಡು. ಬರೀ ನನ್ನ ಕತೆಯೇ ಆಯಿತು. ನಿನ್ನ ಬಗ್ಗೆ ಹೇಳು. ಅಪ್ಪ ಅಮ್ಮ ಚೆನ್ನಾಗಿದ್ದಾರಾ? ಮದುವೆ ಆಗಿದ್ದೀಯ? ದೊಡ್ಡ ನೌಕರಿಯಲ್ಲಿಯೇ ಇದ್ದೀಯ ಅಂತ ಇವರು ಹೇಳಿದರು. ಹಾಲು ಕುಡಿದಷ್ಟೆ ಸಂತೋಷವಾಯಿತು ನೋಡು...' ಅಕ್ಕನ ಮಾತಿಗೆ, ಮಮತೆಗೆ ಬಡತನವೆಂಬುದೇ ಇರಲಿಲ್ಲ.

ಅಕ್ಕ ಹೇಳಿದ ಮಾತಿನ ಕೊನೆಯ ಎಳೆಯನ್ನೇ ಹಿಡಿದು ರಾಮಣ್ಣನೊಂದಿಗೆ ಮಾತು ಆರಂಭಿಸಿದೆ. ನನ್ನ ಯೋಜನೆಯನ್ನು ವಿವರವಾಗಿ ಹೇಳಿದೆ. 'ನಿನ್ನ ಮೇಲೆ ನನಗೆ ವಿಶ್ವಾಸ ಇದೆ ಭಾರ್ಗು, ನೀನು ಹೇಳಿದ ಹಾಗೆಯೇ ಮಾಡುತ್ತೇನೆ' ಎಂದ. ಮಾತು ಮುಗಿಸಿ ನಾವು ನಿದ್ದೆ ಹೋಗುವಾಗ ಮೂಡಣದಲ್ಲಿ ಬೆಳಗಾಗುವ ಸೂಚನೆ ಕಂಡಿತ್ತು.

★★★

ಮತ್ತೆ ಉದ್ಯೋಗದಲ್ಲಿ ತೊಡಗಿಸಿಕೊಂಡ ನನಗೆ ಈ ಘಟನೆ ಕ್ರಮಕ್ರಮೇಣ ಹಿಂದೆ ಸರಿಯಿತು. ಸಿರಿಪುರದಿಂದ ಹೊರಟ ಒಂದೇ ವರ್ಷದಲ್ಲಿ ನನ್ನ ಮದುವೆಯೂ ಆಯಿತು. ಸ್ವತಃ ಹೋಗಿ ಕರೆಯಲಿಕ್ಕಾಗದಿದ್ದರೂ ಕಳಿಸಿದ ಆಮಂತ್ರಣ ಪತ್ರಿಕೆಗೇ ಓಗೊಟ್ಟು ರಾಮಣ್ಣ, ಅಕ್ಕ ಇಬ್ಬರೂ ಬಂದುದರಿಂದ ನನಗಾದ ಸಂತೋಷ ಅಷ್ಟಿಷ್ಟಲ್ಲ. ಗೋಪಾಲನ ಗ್ಯಾರೇಜು ಚೆನ್ನಾಗಿ ನಡೆಯುತ್ತಿದೆ, ಸಾಲದ ಕಂತನ್ನು ನಿಯಮಿತವಾಗಿ ತುಂಬುತ್ತಿದ್ದಾನೆ ಎಂದು ರಾಮಣ್ಣ ಹೇಳಿದಾಗ ತುಂಬಾ ಸಮಾಧಾನವಾಯಿತು.

ಮತ್ತೆ ಹೊಸ ಬದುಕು. ರಸಭರಿತ ದಿನಗಳು. ಪದೋನ್ನತಿ ದೊರೆತು ಹರ್ಷ ಇಮ್ಮಡಿಸಿತು.